ಸ್ಫಟಿಕದಂತಹ ನೀರಿದ್ದ ಕೆರೆಯನ್ನು ಬಿಟ್ಟು ಹೋಗಲು ವಿರೂಪಾಕ್ಷಿಗೆ ಮನಸ್ಸೇ ಇಲ್ಲ.

"ಅಪ್ಪಾಜಿ ಕೃತಿ ರಚನೆ ಮಾಡುತ್ತಿರುತ್ತಾರೆ. ಇಲ್ಲಿದ್ದು ನೀನು ಏನು ಮಾಡುವೆ?" ಪೊನ್ನಲಾದೇವಿ ಮಗಳನ್ನು ಜೊತೆಯಲ್ಲೇ ಕರೆದೊಯ್ಯಲು ಪ್ರಯತ್ನಿಸಿದಳು.

"ಇರಲಿ ಬಿಡು. ನಾನು ಕೃತಿ ರಚಿಸಿದರೆ ಅವಳು ಚಿತ್ರ ರಚಿಸುತ್ತಾಳೆ. ಅಲ್ಲವೇ ನನ್ನ ವೀರಪುತ್ರಿ?" ಮಹಾರಾಜರು ಮುದ್ದು ಮಗಳಿಗಾಗಿ ಶಿಫಾರಸು ಮಾಡಿದರು.

ವಿರೂಪಾಕ್ಷಿ ಉತ್ಸಾಹದಿಂದ ತಲೆದೂಗಿದಳು.

ಅಮ್ಮ ಪರಿವಾರದೊಂದಿಗೆ ಹೊರಟು ಹೋಗಿದ್ದಳು. ತಂದೆಯೂ ಮಗಳೂ ಏಕಾಂತದಲ್ಲಿ ಕುಳಿತು ತಮ್ಮ ತಮ್ಮ ಸೃಷ್ಟಿಗಳಲ್ಲಿ ಮಗ್ನರಾಗಿದ್ದರು.

ಬಹಳ ಹೊತ್ತಿನ ನಂತರ ವಿರೂಪಾಕ್ಷಿ ಚಿತ್ರವನ್ನು ಮುಗಿಸಿ ಅಪ್ಪಾಜಿಯವರಿಗೆ ತೋರಿಸಲೆಂದು ಅವರು ಕುಳಿತಿದ್ದ ಕಲ್ಲು ಮಂಟಪದ ಕಡೆ ತಲೆ ಎತ್ತಿ ನೋಡಿದಾಗ –

ಮುಖವಾಡ ಧರಿಸಿದ್ದ ಒಬ್ಬ ಆಗಂತುಕ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗಿ ಅಪ್ಪಾಜಿಯವರ ಹಿಂದೆ ನಿಂತಿರುವುದನ್ನು ಕಂಡಳು. ಒಮ್ಮೆಗೇ ಅವಳ ನಾಲಿಗೆ ಒಣಗಿತು. ಎತ್ತಿ ಹಿಡಿದಿದ್ದ ಅವನ ಕೈಯಲ್ಲಿ ಮಿರಿ ಮಿರಿ ಹೊಳೆಯಿತು ಒಂದು ಚೂರಿ!

"ಅಪ್ಪಾ... ಜೀ...!"

ವಿರೂಪಾಕ್ಷಿಯ ಚೀತ್ಕಾರದಿಂದ ಆ ಪ್ರಾಂತ್ಯವೇ ಅದುರಿತು.

ವಿಜಯನಗರದ ರಾಜಧಾನಿಯಾದ ವಿರೂಪಾಕ್ಷಪುರ ಅಲ್ಲೋಲಕಲ್ಲೋಲವಾಗಿತ್ತು.

ಮಹಾರಾಜರನ್ನು ಕೊಲ್ಲುವ ಪ್ರಯತ್ನ ನಡೆದಿದೆ ಎಂದರೆ ಅದು ಸಾಮಾನ್ಯ ವಿಷಯವೇನು ?

ಪ್ರಜೆಗಳ ಹಿತರಕ್ಷಕರೂ ಪರಮ ದಯಾಳುವೂ ಆದ ಮಹಾರಾಜರನ್ನು ಕೊಲ್ಲಲು ಯಾರು, ಏಕೆ ಪ್ರಯತ್ನ ಮಾಡಿದರು? ಈ ದುರ್ಘಟನೆ ಹೇಗೆ ಸಂಭವಿಸಿತು? ಪ್ರಜೆಗಳು ತಮ್ಮ ತಮ್ಮ ಊಹಾಪೋಹಗಳನ್ನು ಹಂಚಿಕೊಂಡು ಚರ್ಚಿಸುತ್ತಿದ್ದರು.

ರಾಜಕುಮಾರ ಮಲ್ಲಿಕಾರ್ಜುನನ ತಲೆಯನ್ನೂ ಅಂತಹದ್ದೇ ಪ್ರಶ್ನೆಗಳು ಕೊರೆಯುತ್ತಿದ್ದವು.

"ಅಣ್ಣ! ನಾನು ಚಿತ್ರವನ್ನು ತೋರಿಸಲೆಂದು ಅಪ್ಪಾಜಿಯವರ ಕಡೆ ತಿರುಗಿದೆ. ಮುಖವಾಡ ಧರಿಸಿದ್ದ ಆ ಕಟುಕನನ್ನು ಕಂಡು ಚೀರಿದೆ. ನಾನು ಚೀರಿದ್ದು, ಆತನ ಚೂರಿ ಅಪ್ಪಾಜಿಯವರ ಮೇಲೆ ಎರಗಿದ್ದು, ಥಟ್ಟನೇ ಅಪ್ಪಾಜಿ ತಿರುಗಿ ಅವನನ್ನು ತಡೆದು ತನ್ನ ಬಲಿಷ್ಠ ಕೈಗಳಿಂದ ಅವನನ್ನ ಬಂಧಿಸಿದ್ದು ಎಲ್ಲವೂ ಏಕ ಕಾಲದಲ್ಲಿ ನಡೆದುಹೋದವು."

ನಡೆದುಹೋದ ಘಟನೆಯನ್ನು ವಿವರಿಸುತ್ತಿದ್ದ ಹಾಗೆಯೇ ವಿರೂಪಾಕ್ಷಿಯ ಒಡಲು ಕಂಪಿಸತೊಡಗಿತು.

"ಛೆ, ಬಂಧಿಸಿದ ಅಪ್ಪಾಜಿ ಅವನನ್ನು ಅಲ್ಲೇ ಸಿಗಿದು ಹಾಕಬೇಕಿತ್ತು! ಒಂದು ಸೊಳ್ಳೆ ಕಚ್ಚಿದರೂ ಅದನ್ನ ರಪ್ಪೆಂದು ಹೊಡೆಯುವುದಿಲ್ಲವೇ? ನಾನೇನಾದರೂ ಅಲ್ಲಿ ಇದ್ದಿದ್ದರೆ..." ಅಸಹನೆಯಿಂದ ಹಲ್ಲು ಮಸೆದನು ಮಲ್ಲಿಕಾರ್ಜುನ.

"ನನಗೂ ಹಾಗೆಯೇ ಅನ್ನಿಸಿತು. ಆದರೆ ಸುಧಾರಿಸಿಕೊಂಡನಂತರ ಅಪ್ಪಾಜಿಯವರು ಹೇಳಿದ ಮಾತನ್ನು ಕೇಳಿದಮೇಲೆ ವಿಷಯ ಹೊಳೆಯಿತು. ಅಪ್ಪಾಜಿಯವರನ್ನು ಮುಟ್ಟುವ ಧೈರ್ಯವನ್ನು ಅವನಿಗೆ ಯಾರು ಕೊಟ್ಟರು? ಅವರನ್ನು ಕೊಲ್ಲುವ ಪಿತೂರಿ ನಡೆಸಿದವರು ಬೇರೆ ಯಾರೋ ಇರಬೇಕು! ಅವನು ಕೂಲಿ ಪಡೆಯಾಳು ಮಾತ್ರ. ಪಿತೂರಿ ಮಾಡಿದ್ದು ವೈರಿಗಳೇ? ಇಲ್ಲ, ಅರಮನೆಯಲ್ಲೇ ಇರುವ ತಮ್ಮವರೇ? ಎಂಬುದನ್ನ ವಿಚಾರಿಸಬೇಕೆಂಬುದು ಅಪ್ಪಾಜಿಯವರ ನಿರ್ಧಾರ. ಎಲಹಂಕ ನಾಡಿನ ದಣ್ಣಾಯಕರ ಬಳಿ ಅವನನ್ನು ಒಪ್ಪಿಸಿ ಬಂಧನದಲ್ಲಿಟ್ಟು ವಿಚಾರಣೆ